**ರಾಜಶ್ರೀ ಟಿ. ರೈ ಪೆರ್ಲ**

ಕಲೆ: ವೆಂಕಟ್ರಮಣ ಭಟ್

# ವಿಕಲ್ಪ

ಇವರು ಬೆಳಗ್ಗೇನೆ ಹೋದವರು ಒಂದು ಫೋನು ಇಲ್ಲ. ಇಷ್ಟು ಹೊತ್ತಾದರೂ ಇನ್ನೂ ಬಂದಿಲ್ಲ. ಆಚೆ ಮನೆಯ ಹುಡುಗನನ್ನು ಬೇರೆ ಕರೆದುಕೊಂಡು ಹೋಗಿದ್ದಾರೆ. ಅವನಾದರೂ ಅಪ್ಪಅಮ್ಮನ ಅನುಮತಿ ಕೇಳಿದ್ದಾನಾ? ಅದೂ ಇಲ್ಲ. ನಾವು ಹೇಗೂ ಮನೇಲಿ ಇದ್ದೀವಿ ಅಂತ ಗಮನಿಸಿಯೇ ಅವನನ್ನು ಬಿಟ್ಟು ಹೋಗಿದ್ದರು. ಅದೇನೋ ಲಲಿತಾಳಿಗೆ ಲೇಡಿ ಡಾಕ್ಟರ್ ಹತ್ತಿರ ಚೆಕಪ್ ಮಾಡಿಸೋದಿತ್ತಂತೆ. ಮಗುವನ್ನು ಸುಮ್ಮನೇ ಆಸ್ಪತ್ರೆಗೆ ಯಾಕೆ ಕರೆದುಕೊಂಡು ಹೋಗುವುದು, ಟೀವಿ ನೋಡಿಕೊಂಡು ಇರಲಿ ಅಂತ ಅದ್ಕೊಂಡಿರಬೇಕು. ನನಗೆ ಕರೆದು ಹೇಳುವುದಕ್ಕೆ ಬಂದಿದ್ದರೇನೋ ಗೊತ್ತಾಗಲಿಲ್ಲ. ಬಾತ್ ರೂಂ ಕ್ಲೀನ್ ಮಾಡುತ್ತಿದ್ದೆ. ಇವರಲ್ಲಿ ಹೇಳಿ ಹೋಗಿರಬೇಕು. ಇನ್ನೂ ಆರು ವರ್ಷ ಮಗುವಿಗೆ. ಇವರ ಕಾರು ಹೊರಟ ಸದ್ದು ಕೇಳಿದ ಕೂಡಲೇ ಓಡಿ ಬಂದಿದ್ದ, ನಾನು ಬರುತ್ತೇನೆ ಮಾಮ ಎಂದು. ಅಷ್ಟಕ್ಕೆ ಇವರು ಕರೆದುಕೊಂಡು ಹೊರಡಬೇಕಾ? ಈ ಕ್ಷಣ ಇದ್ದ ಹಾಗೆ ಇನ್ನೊಂದು ಕ್ಷಣ ಇರೋದಿಲ್ಲ. ಸಂಬಂಧಿಕರಾ ನೆಂಟರಾ, ಯಾರದ್ದೋ ಮಗು, ನಾಳೆ ಏನಾದರೂ ಹೆಚ್ಚೂ ಕಡಿಮೆ ಆಗಬೇಕು. ಅಲ್ಲಾ, ನಾನು ಯಾಕೆ ಇವತ್ತು ಇಷ್ಟು ನಕಾರಾತ್ಮಕವಾಗಿ ಯೋಚಿಸುತ್ತಿದ್ದೇನೆ? ಪಕ್ಕದ ಮನೆ ಲಲಿತಾ ಮತ್ತು ಸುರೇಶನ ಮಗ ಸುಶಾಂತ ಇದೇ ಮೊದಲ ಸಲ ಅಲ್ಲ ಇವರ ಜೊತೆ ಬರುವುದು. ಹತ್ತು ವರ್ಷದಿಂದ ನೆರೆಕರೆ. ಗಂಡಹೆಂಡತಿ ಇಬ್ಬರೂ ಉದ್ಯೋಗಿಗಳು. ಇವರು ಬ್ಯಾಂಕ್ ಉದ್ಯೋಗಿ, ನಾನು ಮನೆ ವಾರ್ತೆ ನೋಡಿಕೊಂಡು ಹಾಯಾಗಿರುವವಳು. ಹಾಗಾಗಿಯೇ ಆ ಮಗು ಶಾಲೆ ಬಿಟ್ಟು ಒಂದಿಷ್ಟು ಬೇಗ ಬಂದರೂ ನಮ್ಮ ಮನೇಲಿ ಹಾಜರು. ಅವನ ಅಪ್ಪಅಮ್ಮ ಬಂದು ಕರೆದುಕೊಂಡು ಹೋಗಬೇಕು. ನಮಗಾದರೂ ಒಂದು ಮಗುವನ್ನು ದೇವರು ಕರುಣಿಸಿಲ್ಲ. ಹಾಗಂತ ಗಂಡನಿಗೆ ಇದೊಂದು ಚಿಂತೆ ಅಂತ ಅನ್ನಿಸಿದ್ದೇ ಇಲ್ಲ. ಸುಮ್ಮನೆ ಯಾಕೆ ಎಲ್ಲರಿಗೂ ಒಳಗಿನ ದುಃಖವನ್ನು ತೋರಣ ಕಟ್ಟಿ ತೋರಿಸುವುದು ಎಂಬ ನಿಲುವು ಇರಬಹುದು. ಇಬ್ಬರೂ ಈ ವಿಚಾರ ಬಂದಾಗ ಸದ್ದಿಲ್ಲದೆ ಉಗುಳು ನುಂಗಿಕೊಳ್ಳುವುದು. ಹೀಗಾಗಿ, ಈ ವಿಚಾರದಲ್ಲಿ ಯಾವ ಬಿರುಸಿನ ಮಾತುಕತೆ, ತಣ್ಣನೆಯ ಹೇಳಿಕೆಗಳು ನಮ್ಮ ನಡುವೆ ಸುಳಿದಿಲ್ಲ.

ಅವಳ ಯೋಚನೆಯನ್ನು ತುಂಡರಿಸುವಂತೆ ಹೊರಗೆ ತರಕಾರಿ ಗಾಡಿಯವನು ಕೂಗಿಕೊಂಡ. ಹೋ... ಗಂಟೆ ಹನ್ನೊಂದಾಯಿತು. ಇವರು ಅಂಚೆ ಕಚೇರಿಗೆ ಅಂತ ಹೋದವರು ಇಷ್ಟು ತಡ ಮಾಡಿದ್ದಾದರೂ ಯಾಕೆ? ಯೋಚಿಸುವುದರಲ್ಲಿ ಯಾವ ಅರ್ಥವೂ ಇಲ್ಲ ಎಂದು ಮೊಬೈಲ್ ಕೈಗೆತ್ತಿಕೊಂಡಳು. ಕಾರು ಚಲಾಯಿಸುವಾಗ ಆಗಾಗ ಕರೆ ಮಾಡಿದರೆ ಅವನಿಗೆ ವಿಪರೀತ ಸಿಟ್ಟು. ಹಾಗಾಗಿ, ಅವಳು ಆಗಾಗ ಕರೆ ಮಾಡುವುದು ಎಂದಿಲ್ಲ. ಇಂದು ನಿರ್ವಾಹವಿರಲಿಲ್ಲ. ಅವಳು ಎರಡೆರಡು ಸಲ ಕರೆ ಮಾಡಿದರೂ ಆ ಕಡೆಯಿಂದ ಉತ್ತರವಿಲ್ಲ! ಕುಮುದಿನಿಯ ಆತಂಕ ನಿಧಾನವಾಗಿ ದ್ವಿಗುಣವಾಗುತ್ತಾ ಹೋಗುತ್ತಿತ್ತು.